ಸಾಕ್ಷಿಯ ಹೆಸರುಃ ಜೆ.ಎಲ್.ನಾಥನ್

ದಿನಾಂಕ 21-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಎಸ್.ಎಂ.ಡಿ. ವಕೀಲರಿಂದಃ</u>

1) ದಿನಾಂಕಃ29-08-2020 ರಂದು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ರಿಂದ 5 ನೇ ಪ್ರತಿವಾದಿಯರು ಹಾಗೂ 6 ನೇ ಪ್ರತಿವಾದಿಯರ ತಂದೆ ಲಕ್ಷ್ಮಣ ರವರು ನನಗೆ ಬರೆದುಕೊಟ್ಟ ಜಮೀನಿನ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಅದು ಸಾಕಷ್ಟು ಸ್ಟಾಂಪ್ ಡ್ಯೂಟಿಯನ್ನು ಕಟ್ಟಿರುವುದಿಲ್ಲವೆಂದು ಕಂಡು ಬರುತ್ತದೆ. ಆದ್ದರಿಂದ ಸದರೀ ದಾಖಲೆಯನ್ನು ಇಂಪೌಂಡ್ ಮಾಡಿಕೊಳ್ಳಲಾಯಿತು.

2) ದಿನಾಂಕಃ 30-09-2005 ರಂದು ಮಂಚಯ್ಯ ಬಿನ್ ಸಣ್ಣಯ್ಯರವರಿಗೆ ಪುಟ್ಟತಾಯಮ್ಮ, ಕಾಂತಮಣಿ, ಸಿದ್ದರಾಮಾಧ್ಯ, ರಾಮಾರಾಧ್ಯ ಮತ್ತು ನಾಗೇಶ್‌ರವರು ಮಕ್ಕಳು ಬರೆದುಕೊಟ್ಟ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

3) ದಾವಾಸ್ವತ್ತಿಗೆ ಸಂಬಂಧಪಟ್ಟ 3 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ 2 ರಿಂದ 4 ಎಂದು ಗುರುತಿಸಲಾಯಿತು.

4) ಕಂದಾಯ ಇಲಾಖೆಯವರು ನೀಡಿದ ವಂಶವೃಕ್ಷದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾಧಂ., ಕೆ.ಆರ್.ನಗರ.